ದಿಃ 24.09.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ 3 ಹಾಗೂ 12 ರವರ ಪರ ಶ್ರೀ ಎಚ್.ಬಿ.ಎಸ್. ವಕೀಲರಿಂದ ,**

8. ದಾವೆ ಹೂಡಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಪ್ರತಿವಾದಿ 1 ರಿಂದ 8 ನನ್ನ ಅಣ್ಣ – ತಮ್ಮಂದಿರು. ಪ್ರತಿವಾದಿ 9 ರಿಂದ 12 ರವರು ದಾವಾ ಸ್ವತ್ತನ್ನು ಖರೀದಿಸಿರುವ ಕಾರಣ ಅವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ಅವರುಗಳು ದಾವಾ ಅನುಸೂಚಿ 3 ನೇ ಸ್ವತ್ತನ್ನು ಖರೀದಿಸಿರುತ್ತಾರೆ. 3 ನೇ ಪ್ರತಿವಾದಿ ನನ್ನ ತಂದೆಯ ಮರಣದ ನಂತರ ಸದರಿ ಸ್ವತ್ತುಗಳನ್ನು ಮಾರಾಟ ಮಾಡಿರುತ್ತಾರೆ. ಸಾಕ್ಷಿ ಮುಂದುವರೆದು ಸದರಿ ಸ್ವತ್ತುಗಳನ್ನು ನನ್ನ ತಂದೆ ನನಗೆ ನೀಡುವುದಾಗಿ ತಿಳಿಸಿದ್ದರು ಎಂದು ನುಡಿಯುತ್ತಾರೆ. ಸದರಿ ಸಂಗತಿಯನ್ನು ವಾದ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ.

9. ಈ ದಾವೆ ಹೂಡುವ ಪೂರ್ವದಲ್ಲಿ ಪ್ರತಿವಾದಿ 9 ರಿಂದ 12 ರವರಿಗೆ ನಾನು ನೋಟೀಸು ನೀಡಿರುವುದಿಲ್ಲ. ದಾವಾ ಸ್ವತ್ತುಗಳು ನನಗೆ ತಿಳಿದಿರುತ್ತದೆ. ಶಿವಮೊಗ್ಗದ ಶೆಟ್ಟಿಹಳ್ಳಿ ಗ್ರಾಮದಲ್ಲಿ 2 ½ ಎಕರೆ ಜಮೀನು, ಭದ್ರಾವತಿಯ ಪದ್ಮೇನಹಳ್ಳಿ ಗ್ರಾಮದ ಸರ್ವೆ ನಂಬರ್ 47 ರಲ್ಲಿ 4 ಎಕರೆ ಜಮೀನು, ಕೊಪ್ಪದಾಳು ಗ್ರಾಮದ ಸರ್ವೆ ನಂಬರ್ 26 ರಲ್ಲಿ 5 ½ ಎಕರೆ ಜಮೀನು ಹಾಗೂ ದೊಣಬಘಟ್ಟ ಗ್ರಾಮದ ಸರ್ವೆ ನಂಬರ್ 49 ರಲ್ಲಿ 1 ಎಕರೆ 37 ಗುಂಟೆ ಜಮೀನು ಇರುತ್ತದೆ. ದಾವಾ ಸ್ವತ್ತುಗಳಿಗೆ ಚೆಕ್ಕುಬಂದಿಯನ್ನು ನಾನು ಹೇಳಿ ಬರೆಸಿರುತ್ತೇನೆ. ಚೆಕ್ಕುಬಂದಿ ಸಂಬಂಧ ನಾನು ನ್ಯಾಯಾಲಯಕ್ಕೆ ಕಂದಾಯ ಅಥವಾ ಸರ್ವೆ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ. ದಾವೆಯಲ್ಲಿ ನಮೂದಿಸಿರುವ ಚೆಕ್ಕುಬಂದಿಯಲ್ಲಿ ಯಾವುದೇ ಸ್ವತ್ತುಗಳು ಇಲ್ಲ ಎಂದರೆ ಸರಿಯಲ್ಲ. ಪದ್ಮೇನಹಳ್ಳಿ ಗ್ರಾಮದಲ್ಲಿ 4 ಎಕರೆ ಜಮೀನು ಇರುತ್ತದೆ

ಎಂದು ವಾದ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸಾಕ್ಷಿ ಸದರಿ ಗ್ರಾಮದಲ್ಲಿ 2 ಎಕರೆ ಸಾಗುವಳಿ ಜಮೀನು ಹಾಗೂ 2 ಎಕರೆ ಕರಾಬು ಜಮೀನು ಇರುತ್ತದೆ ಎಂದು ನುಡಿಯುತ್ತಾರೆ.

10. ನನ್ನ ಅಜ್ಜ ಸಯ್ಯಾನ್ ಸಾಬ್ ರವರನ್ನು ನಾನು ನೋಡಿರುವುದಿಲ್ಲ. ಅವರಿಗೆ 5 ಜನ ಗಂಡು ಮಕ್ಕಳು ಹಾಗೂ 1 ಹೆಣ್ಣು ಮಗು. ಆತ ದೊಣಬಘಟ್ಟ ಗ್ರಾಮದಲ್ಲಿ ವಾಸ ಇದ್ದರು. ಆತ ವ್ಯವಸಾಯ ಮಾಡುತ್ತಿದ್ದರು. ಆತನಿಗೆ ಏನು ಜಮೀನು ಇತ್ತು ನನಗೆ ತಿಳಿದಿಲ್ಲ. ಆತ ಯಾವಾಗ ಮೃತ ಪಟ್ಟಿರುತ್ತಾರೆ ನನಗೆ ತಿಳಿದಿಲ್ಲ. ಆತನಿಗೆ ಜಮೀನುಗಳು ಇದ್ದವು ಎಂದು ನಾನು ವಾದ ಪತ್ರದಲ್ಲಿ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ.

11. ನನ್ನ ತಂದೆ ಉಮ್ಮರ್ ಸಾಬ್ ಸದರಿ ಸಯ್ಯಾನ್ ಸಾಬ್ ರವರ 3 ನೇ ಮಗ. ನನ್ನ ತಂದೆಗೆ ಸುಮಾರು 16 ಎಕರೆ ಜಮೀನು ಇತ್ತು. ಪದ್ಮೇನಹಳ್ಳಿ ಗ್ರಾಮದಲ್ಲಿ ಸರ್ವೆ ನಂಬರ್ 47 ರಲ್ಲಿ 4 ಎಕರೆ ಜಮೀನು, ಕೊಪ್ಪದಾಳು ಗ್ರಾಮದ ಸರ್ವೆ ನಂಬರ್ 26 ರಲ್ಲಿ 5 ½ ಎಕರೆ, ಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂಬರ್ 152 ರಲ್ಲಿ 2 ½ ಎಕರೆ ಹಾಗೂ ದೊಣಬಘಟ್ಟ ಗ್ರಾಮದ ಸರ್ವೆ  ನಂಬರ್ 49 ರಲ್ಲಿ 1 ಎಕರೆ 37 ಗುಂಟೆ ಜಮೀನು ಇತ್ತು. ನನ್ನ ತಂದೆ ದೊಣಬಘಟ್ಟ ಗ್ರಾಮದಲ್ಲಿ ವಾಸ ಇದ್ದರು. ಸದರಿ ಮನೆ ನನ್ನ ತಂದೆಗೆ ಸೇರಿದ್ದು. ಅದು ಹಂಚಿನ ಮನೆ ಆಗಿತ್ತು. ಅವರಿಗೆ 1 ಮನೆ ಮಾತ್ರ ಇತ್ತು. ನನ್ನ ತಂದೆಗೆ 4 ಮನೆಗಳು ಇದ್ದವು ಎಂದರೆ ಸರಿಯಲ್ಲ. ಆ ಪೈಕಿ ಒಂದು ಮನೆಯನ್ನು 1 ನೇ ಪ್ರತಿವಾದಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಉಳಿಕೆ 3 ಮನೆಗಳನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ಅದು ಒಂದು ದೊಡ್ಡ ಮನೆ ಮಾತ್ರ ಎಂದು ನುಡಿಯುತ್ತಾರೆ.   ಸಾಕ್ಷಿಗೆ ಎರಡು ಭಾವಚಿತ್ರಗಳನ್ನು ತೋರಿಸಿ ಅದರಲ್ಲಿನ ನಿರ್ಮಾಣ ಹಂತದ ಮನೆಯನ್ನು ಗುರುತಿಸಲು ಹೇಳಲಾಗಿ ಸಾಕ್ಷಿ ಅವುಗಳನ್ನು ನೋಡಿ ತಾನು ನಿರ್ಮಾಣ ಮಾಡುತ್ತಿರುವ ಮನೆ ಎಂದು ಒಪ್ಪಿಕೊಂಡ

ಮೇರೆಗೆ ಅವುಗಳನ್ನು ಅಡ್ಡಲಾಗಿ ನಿ.ಡಿ. 2 ಹಾಗೂ 3 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಿ ಅದರಲ್ಲಿನ ಮನೆ 7 ನೇ ಪ್ರತಿವಾದಿಗೆ ಸೇರಿದ್ದು ಎಂದು ಸೂಚಿಸಲಾಗಿ ಸಾಕ್ಷಿ ಅದನ್ನು ಒಪ್ಪಿಕೊಂಡ ಮೇರೆಗೆ ಅದನ್ನು ಅಡ್ಡಲಾಗಿ ನಿಡಿ. 4 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಭಾವಚಿತ್ರವನ್ನು ತೋರಿಸಿ ಅದರಲ್ಲಿನ ಮನೆ 4 ನೇ ಪ್ರತಿವಾದಿಗೆ ಸೇರಿದ್ದು ಎಂದು ಸೂಚಿಸಲಾಗಿ ಸಾಕ್ಷಿ ಅದನ್ನು ಒಪ್ಪಿಕೊಂಡ ಮೇರೆಗೆ ಅದನ್ನು ಅಡ್ಡಲಾಗಿ ನಿಡಿ. 5 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಭಾವಚಿತ್ರವನ್ನು ತೋರಿಸಿ ಅದರಲ್ಲಿನ ಮನೆ 6 ನೇ ಪ್ರತಿವಾದಿಗೆ ಸೇರಿದ್ದು ಎಂದು ಸೂಚಿಸಲಾಗಿ ಸಾಕ್ಷಿ ಅದನ್ನು ಒಪ್ಪಿಕೊಂಡ ಮೇರೆಗೆ ಅದನ್ನು ಅಡ್ಡಲಾಗಿ ನಿಡಿ. 6 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಭಾವಚಿತ್ರವನ್ನು ತೋರಿಸಿ ಅದರಲ್ಲಿನ ಮನೆ 5 ನೇ ಪ್ರತಿವಾದಿಗೆ ಸೇರಿದ್ದು ಎಂದು ಸೂಚಿಸಲಾಗಿ ಸಾಕ್ಷಿ ಅದನ್ನು ಒಪ್ಪಿಕೊಂಡ ಮೇರೆಗೆ ಅದನ್ನು ಅಡ್ಡಲಾಗಿ ನಿಡಿ. 7 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಭಾವಚಿತ್ರವನ್ನು ತೋರಿಸಿ ಅದರಲ್ಲಿನ ನಿವೇಶನ 8 ನೇ ಪ್ರತಿವಾದಿಗೆ ಸೇರಿದ್ದು ಎಂದು ಸೂಚಿಸಲಾಗಿ ಸಾಕ್ಷಿ ಅದನ್ನು ಒಪ್ಪಿಕೊಂಡ ಮೇರೆಗೆ ಅದನ್ನು ಅಡ್ಡಲಾಗಿ ನಿಡಿ. 8 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಿ ಅದರಲ್ಲಿನ ಮನೆ ತನ್ನ ತಂದೆಗೆ ಸೇರಿದ ಮನೆ ಎಂದು ಸೂಚಿಸಲಾಗಿ ಸಾಕ್ಷಿ ಅದನ್ನು ಒಪ್ಪಿಕೊಂಡ ಮೇರೆಗೆ ಅದನ್ನು ಅಡ್ಡಲಾಗಿ ನಿಡಿ - 9 ಎಂದು ಗುರುತಿಸಲಾಯಿತು. ಸದರಿ ಮನೆಗಳು ಹಾಗೂ ನಿವೇಶನ ದೊಣಬಘಟ್ಟ ಗ್ರಾಮದ ಸರ್ವೆ ನಂಬರ್ 45/1 ರಲ್ಲಿ ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಸ್ವತ್ತುಗಳನ್ನು ನನ್ನ ತಂದೆ ಖರೀದಿಸಿ ನಮಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತುಗಳ ಖಾತೆ 2-3 ವರ್ಷಗಳ ಹಿಂದೆ ನಮ್ಮಗಳ ಹೆಸರಿಗೆ ವರ್ಗಾವಣೆ ಆಗಿರುತ್ತದೆ ಎಂದರೆ ಸರಿ. ಸದರಿ ಸ್ವತ್ತುಗಳಿಗೆ ನಾವೇ ಕಂದಾಯ ಪಾವತಿಸುತ್ತಿರುತ್ತೇವೆ. ಸದರಿ ಸ್ವತ್ತುಗಳಿಗೆ ನಾವು ವಿದ್ಯುತ್ ಸಂಪರ್ಕ ಪಡೆದಿರುತ್ತೇವೆ. ಸದರಿ ಮನೆಗಳನ್ನು 15 ವರ್ಷಗಳ ಹಿಂದೆ ನನ್ನ

ತಂದೆ ನೀಡಿರುತ್ತಾರೆ ಎಂದರೆ ಸಾಕ್ಷಿ ಸುಮಾರು 8 ವರ್ಷಗಳ ಹಿಂದೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ.

12. 3 ನೇ ಪ್ರತಿವಾದಿಗೆ ನನ್ನ ತಂದೆ ಯಾವುದೇ ಮನೆ ನೀಡಿಲ್ಲ ಎಂದರೆ ಸರಿ. ನನ್ನ ತಂದೆಗೆ ಸೇರಿದ ಹಳೆಯ ಮನೆಯಲ್ಲಿ 1 ನೇ ಪ್ರತಿವಾದಿ ವಾಸ ಇರುತ್ತಾರೆ. ಸದರಿ ಮನಗಳು ಹಾಗೂ ನಿವೇಶನದ ಸಂಗತಿ ಈ ದಾವೆ ಹೂಡುವ ಸಮಯದಲ್ಲಿ ನನಗೆ ತಿಳಿದಿತ್ತು ಎಂದರೆ ಸರಿ. ಸದರಿ ಸ್ವತ್ತುಗಳ ವಿಷಯವನ್ನು ನಾನು ಉದ್ದೇಶಪೂರ್ವಕವಾಗಿ ವಾದ ಪತ್ರದಲ್ಲಿ ತಿಳಿಸಿಲ್ಲ ಎಂದರೆ ಸರಿ.

13. ದಾವಾ ಸ್ವತ್ತುಗಳು ನನ್ನ ತಂದೆಗೆ ಸೇರಿದ್ದು ಎಂಬ ಬಗ್ಗೆ ನಾನು ಏನು ದಾಖಲೆ ನೋಡಿರುತ್ತೇನೆ ನನಗೆ ಹೇಳಲು ಬರುವುದಿಲ್ಲ. ದಾವಾ ಸ್ವತ್ತುಗಳು ನನ್ನ ತಂದೆಗೆ ಹೇಗೆ ಬಂದಿರುತ್ತದೆ ಎಂದು ನನಗೆ ತಿಳಿದಿರುತ್ತದೆ. ಕೆಲವು ಸ್ವತ್ತುಗಳನ್ನು ನನ್ನ ತಂದೆ ಸ್ವಂತವಾಗಿ ಖರೀದಿಸಿದ್ದು, ಉಳಿದವು ನನ್ನ ತಾತನಿಂದ ಬಂದಿರುತ್ತವೆ. ನನ್ನ ಅಜ್ಜನಿಂದ ನನ್ನ ತಂದೆಗೆ 5 ಎಕರೆ ಜಮೀನು ಬಂದಿರುತ್ತದೆ. ನನ್ನ ತಂದೆ ಸದರಿ ಶೆಟ್ಟಿಹಳ್ಳಿ ಗ್ರಾಮ ಜಮೀನು ಹಾಗೂ ದೊಣಬಘಟ್ಟ ಗ್ರಾಮದ ಸರ್ವೆ ನಂಬರ್ 45 ರಲ್ಲಿ 2 ಎಕರೆ ಜಮೀನು ಖರೀದಿಸಿದ್ದರು. ಆ ಪೈಕಿ 20 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ. ಆ ಸಂಬಂಧ ಕ್ರಯ ಪತ್ರಗಳನ್ನು ನಾನು ನೋಡಿರುವುದಿಲ್ಲ. ದಾವಾ ಸ್ವತ್ತುಗಳ ಬಗ್ಗೆ ನನಗೆ ಸರಿಯಾದ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು ಮುಂದೂಡಲಾಯಿತು.**

(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಟಿ.ಶ್ರೀಕಾಂತ್)**
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ**